ಚಂದಾ ದರ
ಸ್ಥಳೀಯರಿಗೆ
4—8—0
ಪರಸ್ಥಳೀಯರಿಗೆ
6—2—0
ಬಿಡಿ ಸಂಚಿಕೆ:
ಮಂಗಳವಾರ 0—1—6
ಶುಕ್ರವಾರ 0—0—6
ಕಾರ್ಯಾಲಯ
ರಥಬೀದಿ, ಮಂಗಳೂರು

ESTD: 1919 ಸ್ಥಾಪನೆ

KANNADA **KANTEERAVA** BI-WEEKLY

ಸಂಪುಟ ೨೮] ಮಂಗಳೂರು, ೧೯೪೬ನೇ ಇಸವಿ ಏಪ್ರಿಲ್ ತಾ. ೨೬ನೇ ಶುಕ್ರವಾರ [ಸಂಚಿಕೆ ೮
VOL·XXVIII] MANGALORE, FRIDAY 26 APRIL 1946 [NO. 8

Registered No. M. 4468

Work Executed by Skilled Artists
O.I Paintings
Commercial Drawings
Cinema Slides
Etc. Etc.
Shevgoor Fine Arts
CAR ST. MANGALORE.

ಮಿ. ಜಿನ್ನರದು — ಒಬ್ಬ ಮನುಷ್ಯನದೇ ಪ್ರದರ್ಶನ

— ಅಮೆರಿಕ ಪತ್ರಿಕೆಯ ವಿವರಣೆ —

ಬಹು ಜನರು ಓದುತ್ತಿರುವ ಅಮೇರಿಕದ ಪತ್ರಿಕೆಯಾದ "ಟೈಮ್ಸ್"ನ ವಿದೇಶೀ ವಿಭಾಗದಲ್ಲಿ ಇಂದು ನಮ್ಮ ಮಿ. ಜಿನ್ನಾ ಸಾಹೇಬರ ಸಮಾಚಾರಗಳೇ ಮುಖ್ಯವಾಗಿ ತುಂಬಿಕೊಂಡಿವೆ. ಆ ಪತ್ರಿಕೆಯ ಮುಖ ಪತ್ರದಲ್ಲಿ ಇಂಡಿಯದ ಭೂಪಠದ ಮೇಲೆ ಮಿ. ಜಿನ್ನಾರವರ ಚಿತ್ರವನ್ನು ಚೆನ್ನಾಗಿ ಒತ್ತಿ ಮುದ್ರಿಸಿದೆ. ಅದರೊಡನೆ ಬ್ರಿಟಿಶ್ ಸಿಂಹಕ್ಕೆ ಅಭಿಮುಖವಾಗಿ ಬಾಯ್ದೆರೆದು ಗರ್ಜಿಸುತ್ತಿರುವ ಎರಡು ಹುಲಿಗಳ ಚಿತ್ರ ಬೇರೆ. ಈ ಚಿತ್ರಗಳ ಕೆಳಗೆ ಹೀಗೆ ಬರೆದಿದೆ:—"ಅಪನ ಮುಸ್ಲಿಂ ಹುಲಿ ಹಿಂದೂ ಪನವನ್ನು ತಿನ್ನಬೇಕೆನ್ನುತ್ತಿದೆ"

ಪತ್ರಿಕೆ ಮತ್ತೆ ಹೇಳುತ್ತಿದೆ:—"ಇಂದು ಮಿ. ಜಿನ್ನರು ತಮ್ಮದಾದ ಒಬ್ಬನೇ ಒಬ್ಬ ಮನುಷ್ಯನ ಪ್ರದರ್ಶನವೇರ್ಪಡಿಸಿಕೊಂಡು ವಿಜೃಂಭಿಸುತ್ತಿದ್ದಾರೆ. ಅವರ ಇಡಿಯ ಮುಸ್ಲಿಂ ಲೀಗಿನಲ್ಲಿ ಯಾವನೊಬ್ಬನಾದರೂ "ಎರಡನೆ ಮನುಷ್ಯ"ನೆಂಬ ಸಂಖ್ಯೆಯಿಂದಾಗಲಿ ಕೊನೆಗೆ ಎಂಟೆಂಬ ಸಂಖ್ಯೆಯಿಂದಾಗಲೀ ಕರೆಯಲ್ಪಡಲಾರನು. ಮಿ. ಜಿನ್ನರು ಉತ್ತರ ಹಿಂದುಸ್ತಾನದ ಮುಸ್ಲಿಂ ನಗರಗಳಲ್ಲಿ ಸಂಚರಿಸುವ ಕಾಲಕ್ಕೆ, ಅವರ ಅನುಯಾಯಿಗಳು ರಾಜ ಮೆರವಣಿಗೆಗಳನ್ನು ಏರ್ಪಡಿಸಿಕೊಳ್ಳುವಾಗಲೆಲ್ಲ ಮಿ. ಜಿನ್ನರಿಗೆ ಬಹಳ ಆನಂದ. ಮಿ. ಜಿನ್ನರ ಪರವಾಗಿ ಕಹಳೆಗಳನ್ನೂದುವವರು ರೈಲ್ವೆ ಸ್ಟೇಶನುಗಳಲ್ಲಿ ಅವರ ಆಗಮನದ ಸೂಚನೆಯಾಗಿ ತಮ್ಮ ಬಿಗಿಲುಗಳನ್ನೂದುತ್ತಾರೆ. ಬೇಂಡಿನವರಿಗೆ ಇನ್ನೇನೂ ಬಾರಿಸಲು ಗೊತ್ತಿಲ್ಲದಿರುವುದರಿಂದ ಅವರು "ದೇವರು ಅರಸರನ್ನು ರಕ್ಷಿಸಲಿ"ಂಬ ಗೀತವನ್ನು ನುಡಿಸುತ್ತಾರೆ. ಹಾಗೆ ಇಂದು ಭಾರತದ ರಂಗ ಭೂಮಿಯಲ್ಲಿ ಗಾಂಧಿಜಿಯವರಲ್ಲ—ಮಿ. ಜಿನ್ನರೇ ಪ್ರಥಮ ಗಣ್ಯ ವ್ಯಕ್ತಿಯಾಗಿ ಕಂಡಾಡುತ್ತಿದ್ದಾರೆ.

"ಬ್ರಿಟಿಶರ "ವಿಭಾಗಿಸಿ ಆಳು" ಎಂಬ ಕಾರ್ಯನೀತಿಯನ್ನು ಮಿ. ಜಿನ್ನರು ತಮ್ಮ ಪಾಕಿಸ್ತಾನದ ಕೇಳಿಕೆಯ ವಿಚಾರದಲ್ಲಿ "ವಿಭಾಗಿಸಿ ಹೊರಟು ಹೋಗಿ"ರೆಂಬ ಮಾತಿಗೆ ತಿರುಗಿಸಿಕೊಂಡಿದ್ದಾರೆ. ಬ್ರಿಟಿಶ್ ಸರಕಾರದವರು ಇಂಡಿಯಕ್ಕೆ ಏಕಮುಖವಾದ ರಕ್ಷಣೆ ಮತ್ತು ಏಕಮುಖವಾದ ಒಳ ದೇಶದ ಸ್ವತಂತ್ರ ವ್ಯಾಪಾರವನ್ನು ಕೊಟ್ಟಿದ್ದಾರೆ. ಮಿ. ಜಿನ್ನರು ಇವೆರಡನ್ನೂ ನಾಶ ಮಾಡುವರು. ಮಿ. ಜಿನ್ನರ ಉತ್ತರ ಪಶ್ಚಿಮ, ಉತ್ತರ ಪೂರ್ವದ ಪಾಕಿಸ್ತಾನವು ಒಂದು ಕೃಷಿಯ ಸಂಸ್ಥಾನವಾಗುವುದು; ಹಿಂದೂಗಳು ಪಾಕಿಸ್ತಾನಕ್ಕೆ ಹಿಂದೂ ಕಲ್ಕತ್ತೆಯನ್ನು ಬಿಟ್ಟು ಕೊಡದಿದ್ದರೆ—ಪ್ರಾಯಶಃ ಅವರು ಬಿಟ್ಟು ಕೊಡಲಾರರು—ಆ ಸಂಸ್ಥಾನವು ಎಲ್ಲ ಸೌಕರ್ಯದಲ್ಲಿಯೂ ಕೈಗಾರಿಕೆಗಳಲ್ಲಿಯೂ ಬಹಳ ಬಡತನದಲ್ಲಿಯೇ ಇರುವುದು. ಹೀಗೆ ಪಾಕಿಸ್ತಾನವು ಉದುರಿ ಹೋದ ಎರಡು ತೋಳುಗಳಂತೆ ನೇತಾಡುತ್ತಿರುವುದು. ಆಳ್ವೊತ್ತೆ ಅಥವಾ ವ್ಯಕ್ತಿಗಳ ಜಾಮೀನು ತೆಗೆದುಕೊಳ್ಳುವ ಆಸ್ಯದಈ ಪ್ರಾಚೀನ ಪದ್ಧತಿಯ ಆಚರಣೆಯೂ ಪಾಕಿಸ್ತಾನದ ಹಿಂದೆಯೇ ಇದೆ ಎಂಬುದನ್ನು ಮಿ ಜಿನ್ನರೇನೂ ಅಡದೆ ಅಡಗಿಸಿ ಇಟ್ಟಿಲ್ಲ. ಹಿಂದೂ ಇಂಡಿಯದ ಮುಸ್ಲಿಮರ ಉಪದ್ರವಕ್ಕೆ, ಪಾಕಿಸ್ತಾನದ ಅಲ್ಪ ಸಂಖ್ಯಾಕ ಹಿಂದೂಗಳು, ಹಾಗೆ ಆಳ್ವೊತ್ತೆಯ ಪದ್ಧತಿಯಿಂದಲೇ ಪರಿಹಾರ ಸಲ್ಲಿಸಬೇಕಾಗಿದೆ. ಉತ್ತರ ಹೇಳಬೇಕಾಗಿದೆ ಅಂದರೆ ಹಿಂದೂ ಇಂಡಿಯದಲ್ಲಿ ಮುಸ್ಲಿಮರನ್ನು ಪೀಡಿಸಿದರೆ ಅದಕ್ಕೆ ಪ್ರತಿಯಾಗಿ ಪಾಕಿಸ್ತಾನದ ಅಲ್ಪ ಸಂಖ್ಯಾಕ ಹಿಂದುಗಳು ತಮ್ಮ ಕಡೆಯಿಂದ ಆಳುಗಳನ್ನು ಒತ್ತೆಯಾಗಿ ಇಡಲೇ ಬೇಕು.

"ಒಂದು ಸಂಯುಕ್ತ ಭಾರತದಲ್ಲಿ ಎಿತವಾದ ಒಂದು ಪಾಕಿಸ್ತಾನದ ಯೋಜನೆಗಾಗಿ ಕಾಂಗ್ರೆಸಿನವರೊಂದು ಒಡಂಬಡಿಕೆಗೆ ಒಪ್ಪಬಹುದು. ಮಿ. ಜಿನ್ನರೂ ಹಿಂದೆ ಹಲವು ಬಾರಿ ಮಾಡಿದಂತೆ ಈಗಲೂ ತಮ್ಮ ಮನಸ್ಸು ಬದಲಾಯಿಸಬಹುದು. ಆದರೆ ಕಾಂಗ್ರೆಸೂ ಲೀಗೂ ಇತ್ತಟ್ಟಿನವರೂ ಬಿಟ್ಟು ಕೊಡದಿದ್ದರೆ, ಬ್ರಿಟಿಶ್ ಮಂತ್ರಿ ಮಂಡಲದ ನಿಯೋಗಗೋಷ್ಠಿಯವರು—ಸಿಎಲ್ ಯುದ್ಧದ ಬೆದರಿಕೆಯನ್ನೇ ಹಾಕಿದರೂ,—ತಮ್ಮಿಂದೇ ಒಂದು ಭಾರತ ರಾಜ್ಯ ಘಟನೆಯನ್ನು ಭಾರತದ ಮೇಲೆ ಹೊರಿಸುವರು.

"ಒಂದು ಮೇಳೆ, ರಾಜ್ಯಘಟನೆಯ ಪ್ರಶ್ನೆ ಇತ್ಯರ್ಥವಾಗಿ ಒಂದು ಸ್ವತಂತ್ರ ಅಖಂಡ ಭಾರತವೇ ಸ್ಥಾಪಿಸಲ್ಪಟ್ಟರೂ ಕೂಡ ಭವಿಷ್ಯವು ಉಜ್ವಲವಾಗಿರದು. ಇಂಡಿಯದಲ್ಲಿ ಇನ್ನೂ ಹೆಚ್ಚಿನ ನೀರಿನ ಕಾಮಗಾರಿಗಳು, ಗೊಬ್ಬರ, ಉತ್ತಮ ಕೃಷಿ ಎಧಾನಗಳು ಮತ್ತು ಕೈಗಾರಿಕೆಗಳು ಇವು ವೃದ್ಧಿಗೊಳ್ಳದೆ, ಆಗಾಗ ತಲೆ ಎತ್ತುತ್ತಿರುವ ಭಾರತದ ಆಹಾರ ಸಮಸ್ಯೆಯು ಭಾರತದ ಸ್ವಾತಂತ್ರ್ಯವೊಂದರಿಂದಲೇ ಪರಿಹಾರವಾಗದು. ಇದಕ್ಕೆ ಉತ್ತಮ ಉಪಾಯವೇನೆಂದರೆ ಅಮೇರಿಕದವರು ಬ್ರಿಟನಿಗೆ ಸಾಲ ಕೊಡುವಂತೆ ಏರ್ಪಡಿಸುವುದು; ಲಂಡನಿನವರು ಆ ಸಾಲದಿಂದ ಇಂಡಿಯಕ್ಕೆ ಯುದ್ಧ ಕಾಲದಲ್ಲಿ ಅಲ್ಲಿಂದ ತೆಗೆದುಕೊಂಡ ಹಣವನ್ನು ಸಾಧ್ಯವಿರುವಷ್ಟೂ ಹಿಂದಿರುಗಿಸುವುದು; ಅಮೆರಿಕದಿಂದ ಇಂಡಿಯಕ್ಕೆ ಬರುವ ಸರಕುಗಳಿಗಾಗಿ ತೆರಲು ಇಂಡಿಯಕ್ಕೆ ಅಗತ್ಯವಿರುವಷ್ಟೂ ಡಾಲರುಗಳನ್ನು ಒದಗಿಸುವುದು"

—ಂಂಃ—

ಮದ್ರಾಸ್ ಕಾಂಗ್ರೆಸಿನ ನಾಯಕತ್ವ

ಶ್ರೀ ಪ್ರಕಾಶಂ ಅವರು ನಾಯಕರಾದರು

ಕಳೆದ ತಾ. ೨೨ರಲ್ಲಿ ಯಥಾಪ್ರಕಾರ ನಮ್ಮ ಶಾಸನ ಸಭೆಯ ಕಾಂಗ್ರೆಸ್ ಪಾರ್ಟಿಯವರ ಮೀಟಿಂಗ್ ಶ್ರೀ ಎ. ಎ. ಗಿರಿಯವರ ಅಧ್ಯಕ್ಷತೆಯಲ್ಲಿ ಜರುಗಿದಾಗ ಈ ಪಾರ್ಟಿ ನಾಯಕಸ್ಥಾನಕ್ಕೆ ಶ್ರೀ. ಕೆ. ಆರ್. ಕಾರಂತರು ಶ್ರೀ॥ ಟಿ ಪ್ರಕಾಶಂ ಅವರ ಹೆಸರು ಸೂಚಿಸಿದರು. ಅದನ್ನು ಶ್ರೀ॥ ಎಸ್. ನಾಗಪ್ಪನವರು ಅನುಮೋದಿಸಿದರು. ಅದರೊಂದಿಗೆ ಅದೇ ಸ್ಥಾನಕ್ಕೆ ಶ್ರೀ। ಕೆ. ಕಾಮರಾಜ ನಾದರರು ಶ್ರೀ। ಸಿ. ಎನ್. ಮುತ್ತುರಂಗ ಮೊದಲಿಯಾರರ ಹೆಸರು ಸೂಚಿಸಿದರು; ಶ್ರೀ। ಕೆ. ಮಾಧವ ಮೇನನರು ಅದನ್ನು ಅನುಮೋದಿಸಿದರು. ಓಟು ತೆಗೆಯಲಾಗಿ ಶ್ರೀ. ಪ್ರಕಾಶಂ ಅವರ ಪರವಾಗಿ ೮೨ ಓಟುಗಳೂ, ಶ್ರೀ। ಮೊದಲಿಯಾರರ ಪರವಾಗಿ ೬೯ ಓಟುಗಳೂ ದೊರಕಿ ಶ್ರೀ। ಪ್ರಕಾಶಂ ಅವರೇ ಬಹುಮತದಿಂದ ಜುನಾಯಿಸಲ್ಪಟ್ಟರು. ಸುಮಾರು ೨೩ ಮಂದಿ ಯಾವ ಕಡೆಗೂ ಓಟು ಕೊಡಲಿಲ್ಲ.

ಶ್ರೀ ಪ್ರಕಾಶಂ ಅವರು ಗವರ್ನರರನ್ನು ಕಂಡರು

ಶ್ರೀ। ಪ್ರಕಾಶಂ ಅವರು ಇಷ್ಟರಲ್ಲೇ ಮದ್ರಾಸ್ ಗವರ್ನರರನ್ನು ಕಂಡರು. ಮದ್ರಾಸ್ ಮಂತ್ರಿಮಂಡಲದವರ ಹೆಸರನ್ನು ಅವರು ಇದೇ ಶ್ರೀ. [illegible] ವಾರ ದೊಳಗೊಪ್ಪಿಸಲಿರುವರು. ಮರುದಿನ ಈ ಮಂತ್ರಿಗಳು ರಾಜಪ್ರಮಾಣ ಮಾಡುವರು. ಪ್ರಾಯಶಃ ಈ ಮಂತ್ರಿಮಂಡಲದಲ್ಲಿ ಆಹಾರ ಶಾಖೆಯ ಮಂತ್ರಿ ಕೂಡ ೧೧ ಮಂದಿ ಇರಬಹುದೆಂದು ತಿಳಿದು ಬಂದಿದೆ. ಅಗತ್ಯವಿದ್ದರೆ ಶ್ರೀ. ಪ್ರಕಾಶಂ ಅವರು ಹೊಸ ಡಿಲ್ಲಿಗೂ ತೆರಳಲೂ ಬಹುದೆಂದು ಅವರ ಹೇಳಿಕೆಯಾಗಿದೆ.

—ಂಂಃ—

ಮಂತ್ರಿಮಂಡಲದ ನಿಯೋಗ ಗೋಷ್ಠಿಗೆ ಸರಕಾರದ ಸೂಚನೆ

ಈಗ ಭಾರತಕ್ಕೆ ಬಂದಿರುವ ಬ್ರಿಟಿಶ್ ಮಂತ್ರಿಗಳಲ್ಲಿ ಮೂವರು—ಭಾರತದ ಸೆಕ್ರೆಟರಿ ಲಾರ್ಡ್ ಪೆಥಿಕ್ ಲಾರೆನ್ಸ್, ವಾಣಿಜ್ಯ ಸಲೆಯ ಅಧ್ಯಕ್ಷ ಸರ್ ಸ್ಟಾಫರ್ಡ್ ಕ್ರಿಪ್ಸ್ ಮತ್ತು ನೌಕಾ ಬಲದ ಪ್ರಥಮ ಲಾರ್ಡರಾದ ಮಿ. ಎ. ವಿ. ಅಲೆಕ್ಸಾಂಡರ್ ಇವರು ಭಾರತದಿಂದ ಹಿಂದಿರುಗುವ ಮೊದಲು ಭಾರತೀಯ ಮುಂದಾಳುಗಳೊಡನೆ ಯಾವ ರೀತಿಯಿಂದಾದರೂ ಒಂದು ಸಂಧಿಯನ್ನು ಮಾಡಿಕೊಂಡೇ ಬರಬೇಕೆಂದು ಬ್ರಿಟಿಶ್ ಸರಕಾರವು ಅವರಿಗೆ ಸಲಹೆ ಮಾಡಿರುವುದಾಗಿ ಸ್ವತಂತ್ರ ಲೇಬರ್ ಪಂಗಡದ ರಾಜಕೀಯ ಕಾರ್ಯದರ್ಶಿಯಾದ ಎಮ್. ಫೆನ್ನರ್ ಬ್ರೂಕ್ವೇ ಅವರು ಡಿಸೆನಿನ ಹಿಂದೂ ಭಾರತೀಯ ಸಂಘದವರ ಸಭೆಯಲ್ಲಿ ಭಾಷಣ ಮಾಡಿದರು.

ಯಾವ ರೀತಿಯಿಂದಾದರೂ ಎಷ್ಟೇ

ವೆಚ್ಚದಿಂದಾದರೂ ಈ ಒಡಂಬಡಿಕೆಯನ್ನು ಭಾರತೀಯ ಮುಂದಾಳುಗಳೊಡನೆ ಮಾಡಿಕೊಂಡು ಬನ್ನಿರೆಂದು ಬ್ರಿಟಿಶ್ ಸರಕಾರ ಈ ಮಂತ್ರಿಗಳಿಗೆ ಕಡ್ಡಾಯವಾಗಿ ಸೂಚಿಸಲು ಕಾರಣಗಳು ಮೂರಿವೆ ಎಂದು ಎಂ. ಫೆ. ಬ್ರೂಕ್ಸ್ ಅವರು ತಿಳಿಸಿದರು (೧) ಭಾರತೀಯ ರಾಜನೈಕಾ ಬಲವನ್ನು ದಂಗೆ ಎದ್ದುದರಿಂದ ಆಟವೆಲ್ಲ ಪೂರೈಸಲಕ್ಕೆ ಬಂತೆಂದೂ ಇಂಡಿಯದಲ್ಲಿನ ಬ್ರಿಟಿಶ್ ಆಳಿಕೆಯು ಮುಗಿಯುತ್ತ ಬರುತ್ತಿದೆ ಎಂದೂ ಸರಕಾರಕ್ಕೆ ಮನವರಿಕೆಯಾದದ್ದು (೨) ಅಮೆರಿಕ ಅನಂತರ ರಷ್ಯಾ ಇವುಗಳ ಬಳಿಕ ಬ್ರಿಟನ್ ಈಗ ಮೂರನೆಯ ಎಶ್ವ ರಾಷ್ಟ್ರವಾಗಿದೆ ಎಂಬ ಈ ಕಾರಣದಿಂದ,–ಅತ್ಯಪ್ತಿಗೊಂಡ ಭಾರತವು ಬ್ರಿಟಿಶರ ಒಳ ದೇಶದ ಕಾರ್ಯಗಳಿಗೊಂದು ಭೀತಿಯ ರೂಪವಾಗಿ ತಡೆಯಾಗಿ ನಿಲ್ಲಬಹುದೆಂದು ಬ್ರಿಟನ್ ತಿಳಿದುಕೊಳ್ಳುವ ಹಾಗೆ ಬಲಾತ್ಕರಿಸಲ್ಪಟ್ಟಿರುವುದು; (೩) ಬ್ರಿಟಿಶರ ಸರಕ್ಕುಗಳಿಗೆ ಹೊಸ ಮ್ಹಾರ್ಕೆಟುಗಳನ್ನು ಕಂಡು ಹಿಡಿಯಬೇಕಾದ ಅವಶ್ಯಕತ್ತೆ— ಈಗಿನ ರಾಜಕೀಯ ಎದ್ಯಮ್ಮಾನಗಳ ಕೆಲವು ಮಟ್ಟಿನ ಬದಲಾವಣೆಗಳಿಂದ—ಉಂಟಾಗಿರುವುದು.

"ಇಂಡಿಯದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಲೇಬರ್ ಸರಕಾರಕ್ಕೆ ನಿರ್ವಂಚನೆಯ ಮನಸ್ಸಿದೆ ಎಂದು ನಿಜವಾಗಿಯೂ ಇಂಡಿಯವು ನಂಬಬೇಕಾದರೆ, ಅದು ಎರಡು ಕೆಲಸಗಳನ್ನು ಮಾಡಬೇಕು; ರಾಜಕೀಯ ಅಪರಾಧಗಳ ಆರೋಪಕ್ಕಾಗಿ ಸೆರೆಮನೆಯಲ್ಲಿ ಕೊಳೆಯುತ್ತಿರುವವರನ್ನೆಲ್ಲ ಬಿಟ್ಟುಬಿಡಬೇಕು; ಕೂಡಲೇ ಉಪ್ಪಿನ ಮೇಲಿನ ಸುಂಕವನ್ನು ರದ್ದುಮಾಡಬೇಕು. ಇದರಿಂದ ಇಂಡಿಯದ ಆದ್ಯಂತದಲ್ಲಿಯೂ ಒಳ್ಳೆಯ ಪರಿಣಾಮವುಂಟಾಗಿ ಅದು ಬ್ರಿಟಿಶ್ ಸರಕಾರದ ನಿರ್ವಂಚನೆಯ ಬುದ್ಧಿಗೊಂದು ನಿದರ್ಶನವಾಗುವುದು" ಎಂದು ಎಂ. ಬ್ರೂಕ್ಸ್ ಅವರು ನುಡಿದರು.

ಹಿಂದೀಯರ ಮೊಟಿಂಗುಗಳಲ್ಲಿ ಪೋಲೀಸರಿರಬಾರದು

"ಅನೇಕ ವರ್ಷಗಳಿಂದಲೂ ಬ್ರಿಟನಿನಲ್ಲಿ ಹಿಂದೀಯರ ಎಲ್ಲ ಮೊಟಿಂಗುಗಳಿಗೂ ಗೃಹ ಕಾರ್ಯದ ಕಾರ್ಯಾಲಯದವರು ಸ್ಕಾಟ್‌ಲೆಂಡ್ ಯಾರ್ಡಿನ ರಾಜಕೀಯ ಶಾಖೆಯ ಪ್ರತಿನಿಧಿಗಳನ್ನು ಕಳುಹುವುದೊಂದು ಪದ್ಧತಿಯಾಗಿದೆ. ಈ ಮೊಟಿಂಗಿಗೂ ಅವರು ಬಂದಿದ್ದಾರೆ" ಎಂದು ಎಂ. ಬ್ರೂಕ್ಸ್‌ಯವರು ನುಡಿಯುತ್ತ "ಅವರು ಖಾಸಗಿ ವ್ಯಕ್ತಿಗಳಾಗಿ ಇಲ್ಲಿದ್ದರೆ ಅವರಿಗೆ ನನ್ನ ಸ್ವಾಗತವೇ" ಎಂದರು.

ಆ ಮೇಲೆ ಅವರು ಹೀಗೆಂದರು:— "ಕಳೆದ ೨೦ ವರ್ಷಗಳಿಂದ ಇಂಡಿಯದ ರಾಜಕಾರಣವನ್ನು ಸಮರ್ಥಿಸುವ ಸಲುವಾಗಿ ಹಲವಾರು ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದೇನೆ. ಆದರೆ ಈ ದೇಶದಲ್ಲಿ ಹಿಂದೀಯರ ಆಶ್ರಯದಲ್ಲಿ ನಡೆಯುವ ಯಾವುದೊಂದು ಸಭೆ ಸಾಮಾಜಿಕ ಕೂಟಗಳಲ್ಲಿಯಾದರೂ ಗೃಹ ಕಾರ್ಯಾಲಯದವರ ರಾಜಕೀಯ ಶಾಖೆಯ ಪೋಲೀಸರು ಇಲ್ಲದೆ ನನ್ನ ಕೆಲಸವು ನಡೆದಿಲ್ಲ" ಎಂದರು. "ಈ ರೀತಿ ಹಿಂದೀಯರನ್ನು ನಡೆಸುವುದರಿಂದ, ಹಿಂದೀಯರು ಬ್ರಿಟನಿನ ಶತ್ರುಗಳೆಂದೇ ಭಾವಿಸಲ್ಪಟ್ಟಂತಾಗುತ್ತದೆ; ಒಳಸಂಚಿನ ಸಂಸ್ಥೆಯವರು ನಮ್ಮ ಮಧ್ಯದಲ್ಲಿರುವಂತೆ, ಅವರನ್ನೇ ಹೆಕ್ಕಿ ಆ ಹಿಂದೀಯರ ಕೊಡೆಗೇ ಬೆರಳಟ್ಟು ತೋರಿಸಿದಂತಾಗುತ್ತದೆ; ಅವರ ಪ್ರತಿಯೊಂದು ಜಲನೆಯನ್ನೂ ಅವರಾಡುವ ಪ್ರತಿಯೊಂದು ಶಬ್ದವನ್ನೂ ಕಾಯುವುದೂ ಆಲೈಸುವುದೂ ಅಗತ್ಯವೆಂದೇ ಸೂಚಿಸಿದ ಹಾಗಾಗುತ್ತದೆ. ಇಂಡಿಯದ ಪರವಾಗಿ ವಾದಿಸಲು ಭಾಷಣವೇದಿಕೆಗೆ ಹತ್ತುವ ಯಾವನೊಬ್ಬನಿಗಾದರೂ ಈ ಪೋಲೀಸರಿಂದ "ಬ್ಲಾಕ್ ಮಾರ್ಕ್" ತಪ್ಪುವಂತಿಲ್ಲ" ಎಂದರು.

"ಹಿಂದುಸ್ಥಾನದೊಡನೆ ಒಂದು ಒಡಂಬಡಿಕೆಯನು ಮಾಡಿಕೊಂಡು ಬರಲಿಕ್ಕಾಗಿ ಬ್ರಿಟಿಶ್ ಮಂತ್ರಿಮಂಡಲದವರು ಸದ್ಭಾವದ ಒಂದು ಪಾರ್ಲಿಮೆಂಟರಿ ಶಿಷ್ಟಮಂಡಲವನ್ನೂ ಅದರ ಬಳಿಕ ಮೂರು ಮಂದಿ ಬ್ರಿಟಿಶ್ ಮಂತ್ರಿಗಳನ್ನೂ ಕಳುಹಿಸಿದ್ದಾರೆ. ಆದ್ದರಿಂದ ಈ ನಿಮಿಷದಿಂದ ಈ ಮೊಟಿಂಗಿನಿಂದಲೇ ಆರಂಭಿಸಿ ಭಾರತೀಯರಿಗಾಗುತ್ತಿರುವ ಈ ಅಪಮಾನವನ್ನು ನಿಲ್ಲಿಸಲೇಬೇಕು" ಎಂದರು

—:o:—

ಡೆಲ್ಲಿಯಲ್ಲಿ ಮಾತುಕತೆಗಳು

ಮುಂದಾಳುಗಳ ಭೇಟಿ

ಮೌಲಾನಾ ಅಜಾದರು ತಿರುಗಿ ಕಳೆದ ತಾ ೧೭ರಲ್ಲಿ ಬ್ರಿಟಿಷ್ ನಿಯೋಗ ಗೋಷ್ಠಿಯವರನ್ನು ಕಂಡು ಎರಡ್ಮೂಗಂಟೆ ಹತ್ತು ನಿನಿಟುಗಳ ಕಾಲ ಮಾತಾಡಿದರು. ಕಾಂಗ್ರೆಸಿನ ನಿಲುಗಡೆಯನ್ನು ಅವರು ಎಶದೀಕರಿಸಿರುವರಾಗಿ ತಿಳಿದುಬಂದಿದೆ. ಅಂದೇ ಸರ್ ಕ್ರಿಪ್ಸರು, ಎಂ. ಜಿನ್ನಾರವರನ್ನೂ ಕಂಡು, ಕಾಂಗ್ರೆಸ್ ಮತ್ತು ಲೀಗಿಗೆ ಇರುವ ವ್ಯತ್ಯಾಸ ಅಲ್ಪಸ್ವಲ್ಪವೆಂದೂ ಅದನ್ನು ಸರಿಹೊಂದಿಸಿಕೊಳ್ಳಬಹುದೆಂದೂ ತಿಳಿಸಿರುವಂತೆ ವಾರ್ತೆ.

ಅದೇ ತಾರೀಕಿನಲ್ಲಿ ಸರ್ ಕ್ರಿಪ್ಸರು ಗಾಂಧಿಜಿ ಮತ್ತು ಪಂಡಿತ ನೆಹರುಗಳೊಡನೆಯೂ ಸಂಭಾಷಣೆ ಬೆಳಸಿದ್ದರು.

ಗಾಂಧಿಜಿಯವರು ಇಂಡಿಯಾ ಸ್ಟೇಟ್ ಸೆಕ್ರೆಟರಿಗಳಾದ ಲಾರ್ಡ್ ಪೆಥಿಕ್ ಲಾರೆನ್ಸ್‌ರನ್ನು ಕಂಡು ಇಬ್ಬರೂ ಪರಸ್ಪರ ಅಭಿಪ್ರಾಯಗಳನ್ನು ಬದಲಾಯಿಸಿಕೊಂಡಂತೆ ತಿಳಿದುಬಂದಿದೆ. ಈ ಭೇಟಿಯೂ ಅದೇ ತಾ. ೧೭ರಲ್ಲಿಯೇ

ಸರ್ ಕ್ರಿಪ್ಸರು ಗಾಂಧಿಜಿ-ಜಿನ್ನಾರವರೊಳಗೆ ಒಂದು ಭೇಟಿಯಾಗುವಂತೆ ಪ್ರಯತ್ನದಲ್ಲಿ ಇದಾರೆನ್ನಲಾಗಿದೆ ಪರಿಸ್ಥಿತಿ ಆಶಾಜನಕವೆಂದು ಸರ್ ಕ್ರಿಪ್ಸರ ಅಭಿಪ್ರಾಯ.

ಬ್ರಿಟಿಷ್ ನಿಯೋಗ ಗೋಷ್ಠಿಯವರಾಗಲೇ ಶ್ರೀನಗರಕ್ಕೆ ತೆರಳಿ ಅಲ್ಲಿ ರಾಜ ಅತಿಥಿಗಳಾಗಿದ್ದಾರೆ. ಅವರು ಬಂದ ಬಳಿಕ ಅವರ ರಾಯಭಾರದ ಕಾರ್ಯ ಮುಂದೆ ಸಾಗುವುದು.

—

ಯು. ಎನ್. ಆರ್. ಆರ್. ಏ.ಗೆ ಎರಡು ಕೋಟಿ

ಮೈಲ್ಕಂಡ ಸಂಸ್ಥೆಗೆ ಎರಡು ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಕೊಡಿಸಿ ಎಂದು ಸರ್ ಎ. ರಾಮಸ್ವಾಮಿ ಮೊದಲಿಯಾರರು ಕೇಂದ್ರ ಎಸೆಂಬ್ಲಿಯವರನ್ನು ಪ್ರಾರ್ಥಿಸಿ ಅದನ್ನು ಮಂಜೂರು ಮಾಡಿದರು. ಈ ಹಣವನ್ನು ಈಗಲೇ ವ್ಯಯ ಮಾಡುವುದಿಲ್ಲ, ಸೆಪ್ಟೆಂಬರದ ಕೊರೆಗೆ ಈ ದೇಶದ ಸ್ಥಿತಿಗತಿಗಳು ಹೇಗೆ ಮೈರ್ವಡುವವೆಂಬುದನ್ನು ತಿಳಿದ ಮೇಲೆ ಈ ಹಣದ ಎಲೆವಾರಿ ಎಂದು ಸರ ಮೊದಲಿಯಾರರು ಭರವಸೆ ಹೇಳಿದ ಬಳಿಕ ಈ ಹಣ ಮಂಜೂರಾಯಿತು.

ಮಹಾತ್ಮಾಜಿಯವರ ಪ್ರತಿಮೆ ಕಾಣೆ

ಈಚೆಗೆ ಶ್ರೀಪುರ ಹಳ್ಳಿಯ ಒಂದು ದೇವ ಸ್ಥಾನದಲ್ಲಿ ಪ್ರತಿಷ್ಠಿಸಲಾಗಿದ್ದ ಮಹಾತ್ಮಾಜಿಯವರ ಪ್ರತಿಮೆ ಕಾಣೆ. ರಾತ್ರಿಯಾರೋ ಅದನ್ನು ಕದ್ದುಬಿಟ್ಟಿದ್ದರು. ಹಳ್ಳಿಯವರು ಬಹಳ ಶ್ರಮಪಟ್ಟು ಹುಡುಕಿದರು. ಕೊನೆಗೆ ಆ ಪ್ರತಿಮೆ ಒಂದು ದೂರದ ಹೊಲದಲ್ಲಿ ಇದ್ದದ್ದು ಕಂಡು ಬಂತು. ಅದರ ಜತೆಯಲ್ಲಿಯೇ ದೇವಸ್ಥಾನದ ಗಂಟೆಯೇ ಮೊದಲಾದ ಇತರ ಪದಾರ್ಥಗಳೂ ಸಿಕ್ಕಿದುವು. ಹಳ್ಳಿಯವರು ತಿರುಗಿ ಆ ಪ್ರತಿಮೆಯನ್ನು ಅತ್ಯಂತ ಸಂತೋಷದಿಂದ ಪ್ರತಿಷ್ಠೆ ಮಾಡಿದ್ದಾರೆ; ತಿರುಗಿ ಪೂಜೆ ಪುನಸ್ಕಾರಗಳು ಹಿಂದಿನಂತೆ ನಡೆಯುತ್ತಿವೆ.

ಮದ್ರಾಸಿನ ಮಕ್ಕಳಿಗೆ ಹಾಲು

ಮದ್ರಾಸ್ ಕಾರ್ಪರೇಶನಿನವರು ಆ ನಗರದ ಸುಮಾರು ೧೦ ಸಾವಿರ ಶಾಲಾ ಮಕ್ಕಳಿಗೆ ಉಚಿತವಾಗಿ ಹಾಲು ಹಂಚುವಂತೆ ನಿರ್ಧರಿಸಿರುತ್ತಾರೆ. ಇದು ಸ್ತುತ್ಯವಾದ ಏರ್ಪಾಡು.

ಶ್ರೀ ಟಿ. ರಾಘವ ಅವರು ದಿವಂಗತರಾದರು

ಬಳ್ಳಾರಿಯ ನಾಟ್ಯಕಲಾಪ್ರವೀಣ ರಾವ್ ಬಹದೂರ್ ತಾಡಪತ್ರಿ ರಾಘವ ಇವರು ಬಳ್ಳಾರಿಯಲ್ಲಿ ಈಚೆಗೆ ದಿವಂಗತರಾದರು. ಇವರೊಬ್ಬ ಸುಪ್ರಸಿದ್ಧ ನಟರು; ಹಿರಿಯ ವಕೀಲರೂ ಆಗಿದ್ದರು. ಇವರ ನಿಧನದಿಂದ ಅಭಿನಯ ಕಲೆಯ ಒಂದು ಶಿಖರವೇ ಕಳಚಿ ಬಿದ್ದಂತಾಯಿತು.

—

ರಕ್ತವಿಷಮಯವಾಗುವುದನ್ನು ಮತ್ತು ಕೀವುಗಟ್ಟುವುದನ್ನು ರಕ್ಷಿಸಿಕೊಳ್ಳಿ.

ಸಾಂಬಕ್ ಅತ್ಯುತ್ತಮ ಎಷಹಾರೀ ಚಿಕಿತ್ಸೆ

ಅಲಕ್ಷ್ಯ ಮಾಡಿದ ಹುಣ್ಣು ವಿಷಮಯವಾಗಿ, ದೀರ್ಘಕಾಲದ ನೋವು ಮತ್ತು ಸಂಕಟಗಳನ್ನುಂಟು ಮಾಡಬಹುದು. ನಿಮ್ಮ ಎಲ್ಲಾ ಗಾಯ ಮತ್ತು ಹುಣ್ಣುಗಳ ಮೇಲೆ ಸಕಾಲದಲ್ಲಿ ಸಾಂಬಕ್ ಮುಲಾಂ ಲೇಪಿಸಿ, ಯಾವತ್ತೂ ಚೇನೆಯನ್ನು ನೀಗಿಸಬಹುದು. ಸಾಂಬಕ್‌ನಲ್ಲಿರುವ ಉತ್ತಮ ವನಸ್ಪತಿ ತೈಲಗಳು ನರಗಳ ಮೂಲಕ ಬೇಗನೇ ಒಳಗೆ ಹೀರಲ್ಪಟ್ಟು ನೋವನ್ನು ಶಾಂತಪಡಿಸಿ, ಉರಿಬಾವನ್ನು ತಗ್ಗಿಸಿ ವ್ರಣಗಳಲ್ಲಿದ್ದ ಅಶುಚಿಯನ್ನು ಸ್ವಚ್ಛಗೊಳಿಸಿ, ಗುಣಪಡಿಸುತ್ತದೆ. ಕಲೆಯೊಂದೂ ಉಳಿಯದಂತೆ ಸಾಂಬಕ್ ಗುಣಪಡಿಸುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳು ಸಾಂಬಕ್ ಸಾಬೂನ್, ಸಾಂಬಕ್ ಪೌಡರು ಬಿಕರಿ ಮಾಡುತ್ತಾರೆ.

ಯಾವಾಗಲೂ ಸಾಂಬಕ್ ಉಪಯೋಗಿಸಿ.

ZAM-BUK

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾಗಿದೆ.

PREMIER LIFE & GENERAL INSURANCE Co., LTD. Madras.

Invites applications from capable Insurance Organisers preferably those in the line with a ready organization to take up the Chief Agency for Motor car Insurance Business on most attractive terms. Best opportunity for right type of persons in view of the Motor car Insurance against third party risk being made compulsory.

USE OUR GENUINE EUCALYPTUS OIL FOR ALL ACHES & PAINS

FOR HEALTH USE SILVER KING CASTOR OIL LAKSHMI OIL MILLS, COIMBATORE.

ಕಾಂಗ್ರೆಸ್ ಪಾರ್ಟಿ ನಾಯಕತ್ವ

ಮದ್ರಾಸ್ ಶಾಸನ ಸಭಾಸದರ ಮೀಟಿಂಗ್

(ಪೂರ್ವ ವೃತ್ತಾಂತ)

ಮೊದಲೇ ನಿರ್ಧರಿಸಿದ ಮೇರೆಗೆ ಮದ್ರಾಸಿನಲ್ಲಿ ಮದ್ರಾಸ್ ಎಸೆಂಬ್ಲಿ ಸಭಾ ಸದಸ್ಯರ ಮೀಟಿಂಗ್ ತ್ಯಾಗರಾಜ ನಗರದಲ್ಲಿ ರಂಗಸ್ವಾಮಿ ಅಯ್ಯಂಗಾರರ ಸ್ಮಾರಕ ಭವನದಲ್ಲಿ ತಾ. ೧೫ನೇ ಅಪರಾಹ್ನ ಗಂಟೆ ೨ಕ್ಕೆ ಸೇರಿತ್ತು. ಕಾಂಗ್ರೆಸ್ ಹೈ ಕಮಾಂಡಿನವರು ಪಾರ್ಟಿ ನಾಯಕರನ್ನಾರಿಸುವ ಕುರಿತು ಕೊಟ್ಟ ಸೂಚನೆಯ ವಿಚಾರದಲ್ಲಿ ಸಮಾಲೋಚಿಸುವುದೇ ಆ ಸಭೆ ಸೇರಿದ ಉದ್ದೇಶವಾಗಿತ್ತು. ಆರಂಭದಲ್ಲಿ ಈ ಮೀಟಿಂಗಿಗೆ ೧೯೬ ಮಂದಿಯಲ್ಲಿ ೧೬೦ ಮಂದಿ ಮೆಂಬರರು ಹಾಜರಿದ್ದರು. ಮಾಜಿ ಮಂತ್ರಿ ಶ್ರೀ ವಿ. ವಿ ಗಿರಿಯವರನ್ನು ಆ ದಿನ ಸಭಾಧ್ಯಕ್ಷರನ್ನಾಗಿ ಆರಿಸಲಾಗಿತ್ತು.

ಶ್ರೀ. ಗಿರಿಯವರು ತಮ್ಮ ಜವಾಬು ದಾರಿ ಸ್ಥಾನದ ಕುರಿತು ಪ್ರಸ್ತಾವಿಸಿ ಎಲ್ಲ ಸದಸ್ಯರ ಸಹಕಾರಕ್ಕಾಗಿ ಪ್ರಾರ್ಥಿಸಿ ಈ ಸಭೆಯ ಮೆಂಬರರು ಮೀಟಿಂಗನ್ನು ಬಿಟ್ಟು ಹೊರ ತೆರಳುವಂತೆ ಅಪೇಕ್ಷಿಸಿದರು. ಕೃತ್ತಿಕೋದ್ಯಮಿಗಳೇ ಮೊದಲಾದವರು ಅಲ್ಲಿಂದ ಹೊರ ತೆರಳಿದ ಬಳಿಕ, ಶ್ರೀ ಗಿರಿಯವರ ಅಪೇಕ್ಷೆಯಂತೆ ಸ್ಥಳೀಯ ಮುಂದಾಳುಗಳಿಗೂ ರಾಷ್ಟ್ರಪತಿಗಳಿಗೂ ನಡೆದ ಈ ಮೀಟಿಂಗಿನ ಸಂಬಂಧ ಕಾಗದ ಪತ್ರಗಳನ್ನು ಶ್ರೀ ಟಿ. ಪ್ರಕಾಶಂ ಅವರು ಸಭೆಯ ಮುಂದೋದಿದರು.

ಶ್ರೀ. ಎ. ವೈದ್ಯನಾಥ ಅಯ್ಯರರು ತಾವೊಂದು ನಿರ್ಣಯ ತರುವೆವೆಂದು ಕೊಟ್ಟ ಸೂಚನೆಯ ವಿಚಾರವನ್ನೆತ್ತಿದರು. ಶ್ರೀ ಗಿರಿಗಳು ನಿರ್ಣಯದ ಅಗತ್ಯವಿಲ್ಲವೆಂದು ಸೂಚಿಸಿ ಹೈ ಕಮಾಂಡಿನವರ ಸಲಹೆಯನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ನಿರ್ಧಾರವನ್ನಷ್ಟೇ ಮಾಡಿದರೆ ಸಾಕೆಂದರು.

ಶ್ರೀ ವೈದ್ಯನಾಥ ಅಯ್ಯರರು ಹೈ ಕಮಾಂಡಿನವರ ಸಲಹೆಯನ್ನು ಮನ್ನಿಸ ಬೇಕೆಂಬ, ಶ್ರೀ. ಸಿ. ರಾಜಗೋಪಾಲಾಚಾರಿಯವರು ಈ ಪಾರ್ಟಿಯ ನಾಯಕತ್ವವನ್ನು ನಿರ್ವಹಿಸಬೇಕೆಂಬ ಅರ್ಥದ ನಿರ್ಣಯವನ್ನು ತರಲಿದ್ದು ಅದನ್ನು ಶ್ರೀ. ಗಿರಿಯವರು ಅಕ್ರಮವೆಂದು ತಳ್ಳಿ ಹಾಕಿದರು. ಶ್ರೀ. ಕಾರಂತರು ಹೈ ಕಮಾಂಡಿನವರ ಸಲಹೆಯನ್ನು ಸ್ವೀಕರಿಸ ಕೂಡದೆಂಬ ಅರ್ಥಕ್ಕೆ ಒಂದು ಠರಾವು ತರಲಿದ್ದರೂ ಅದೂ ತಳ್ಳಿ ಹಾಕಲ್ಪಡುವ ಸಂಭವವಿತ್ತು.

ರಾಜಾಜಿಯವರ ನಾಯಕತ್ವವಿಲ್ಲ

ಅನಂತರ ನಾಯಕತ್ವದ ವಿಚಾರದಲ್ಲಿ ಶ್ರೀ ವೈದ್ಯನಾಥ ಅಯ್ಯರರು ಹೈ ಕಮಾಂಡಿನ ಸಲಹೆಯನ್ನೇ ಸ್ವೀಕರಿಸುವ ವಿಚಾರವನ್ನು ಸಮರ್ಥಿಸಿದರು. ಶ್ರೀ ಕಾರಂತರು ಆ ಸಲಹೆಯನ್ನು ಸ್ವೀಕರಿಸ ಬಾರದೆಂದು ಅದನ್ನು ವಿರೋಧಿಸಿದ್ದಲ್ಲದೆ, ಶ್ರೀ ಸಿ ಆರ್. ಆಚಾರಿಯವರ ಹಿಂದಿನ ಪಾರ್ಟಿ ನಾಯಕತ್ವದ ಕಾರ್ಯನೀತಿಯ ಕುರಿತು ಕಟುವಾಗಿ ಟೀಕಿಸಿದರು.

ಈ ವಿಷಯದಲ್ಲಿ ಮೀಟಿಂಗಿನಲ್ಲಿ ಜರ್ಜೆಯಾಗಿ ಓಟು ತೆಗೆಯಲಾಯಿತು. ಹೈ ಕಮಾಂಡಿನ ಸಲಹೆಯನ್ನು ಸ್ವೀಕರಿಸಬೇಕಾಗಿಲ್ಲವೆಂಬುದರ ಪರವಾಗಿ ೧೪೮ ಓಟು, ಸ್ವೀಕರಿಸಬೇಕೆಂಬುದರ ಪರವಾಗಿ ೩೫ ಓಟು, ತಟಸ್ಥವಾಗಿ ೨ ಓಟುಗಳೂ ದೊರಕಿದುವು. ಹಾಗೆ ಹೈ ಕಮಾಂಡಿನ ಸಲಹೆಯೂ ಶ್ರೀ ಸಿ. ಆರ್. ಆಚಾರಿಯವರ ನಾಯಕತ್ವವೂ ತಿರಸ್ಕೃತವಾಯಿತು.

ರಾಷ್ಟ್ರಪತಿ ಮೌಲಾನಾ, ಮಹಾತ್ಮಾಜಿ ಮತ್ತು ಸರ್ದಾರ್ ಪಟೇಲರು ಕೊಟ್ಟ ಸಲಹೆಯ ಕುರಿತು ಮದ್ರಾಸಿನ ಎಸೆಂಬ್ಲಿ ಸದಸ್ಯರು ನಾನಾ ರೀತಿಯ ಅರ್ಥ ಮಾಡಿ ಕೊಂಡಿರುವರೆಂದು ದಿಲ್ಲಿಯವರಿಗೆ ತಿಳಿದು ಬಂದದ್ದರ ಮೇಲೆ ಅಲ್ಲಿಂದ ಸರಿಯಾದ ಅರ್ಥ ವಿವರಣೆಯು ಇಂಥದೇ ಎಂದು ತಿಳಿಸ ಲಾಗಿತ್ತು.

ತಾ. ೧೯ರಲ್ಲಿ ನೆರೆದ ಮೀಟಿಂಗಿನಲ್ಲಿ ಶ್ರೀ ಗಿರಿಯವರು ಈ ಮೀಟಿಂಗನ್ನು ತಾ ೨೦ಕ್ಕೆ ಮುಂದುವರಿಸಿದೆ ಎಂದೂ ರಾಷ್ಟ್ರಪತಿಗಳಿಂದ ಈ ವಿಷಯದಲ್ಲಿ ಯಾವ ಉತ್ತರವೂ ಇನ್ನೂ ಬಂದಿಲ್ಲವೆಂದು ತಿಳಿಯ ಪಡಿಸಿದರು.

ತಾ. ೨೦ರಲ್ಲಿ ನಡೆದ ಮೀಟಿಂಗಿಗೂ ಶ್ರೀ ವಿ. ವಿ. ಗಿರಿಗಳೇ ಅಧ್ಯಕ್ಷರಾಗಿದ್ದರು. ೧೯೬ ಮಂದಿ ಪಾರ್ಟಿ ಮೆಂಬರರಲ್ಲಿ ಸುಮಾರು ೧೯೦ ಮಂದಿ ಹಾಜರಿದ್ದರು. ಆ ಸಮಯದಲ್ಲಿ ಮೌಲಾನಾ ವಿಜಾದ ರಿಂದ ಬಂದ ತಂತಿಯನ್ನೋದಲಾಯಿತು. ತಂತಿಯಲ್ಲಿ "ನಾಯಕತ್ವಕ್ಕೆ ಒಂದಕ್ಕಿಂತ ಹೆಚ್ಚು ಹೆಸರುಗಳನ್ನು ಕಳುಹಿಸಿ; ಅವು ಗಳಲ್ಲಿ ಒಂದನ್ನು ಆರಿಸುವೆನು" ಎಂದಿತ್ತು. ಅನಂತರ ಈ ತಂತಿಗೂ ಪಾರ್ಟಿ ಹಕ್ಕಿಗೂ ಇರುವ ಸಂಬಂಧದ ಕುರಿತು ಚರ್ಚೆ ನಡೆದು, ರಾಷ್ಟ್ರಪತಿಗಳ ತಂತಿಯ ಅಭಿ ಪ್ರಾಯ ಕೇವಲ "ಶಿಫಾರಸು" ಮಾತ್ರವೇ ಎಂಬ ವಾದಕ್ಕೆಟ್ಟಿತು.

ಶ್ರೀ ವಿಶ್ವನಾಥಂ ಅವರು ರಾಷ್ಟ್ರಪತಿ ಗಳ ತಂತಿಯಲ್ಲಿ ನಾಯಕತ್ವಕ್ಕಾಗಿ ಕೆಲವು ಹೆಸರುಗಳನ್ನು ಕಳುಹಿಸಬೇ ಕೆಂದು ಅಪೇಕ್ಷಿಸಿದ್ದು ಸ್ವತಂತ್ರ ಚುನಾ ವಣೆಯ ಯಾವತ್ತೂ ತತ್ವಗಳಿಗೂ ವಿರೋಧವೆಂದೂ ಆದ್ದರಿಂದ ಪಾರ್ಟಿ ವಿಶ್ವಾಸಕ್ಕೆ ಪಾತ್ರನಾದವನೊಬ್ಬನನ್ನು ಚುನಾಯಿಸುವ ಕಾರ್ಯವು ಮುಂದು ವರಿಯಬಹುದೆಂದೂ ಹೇಳಿ ಒಂದು ನಿರ್ಣ ಯವನ್ನು ಆ ಬಗೆಗೆ ತರುವವರಾಗಿದ್ದರೂ ಅದು ಮಾತಿನಲ್ಲೇ ಅಂತ್ಯವಾಗಿ ಚರ್ಚೆ ಮುಂದುವರಿಯಿತ್ತು.

ಶ್ರೀ. ಕೆ. ಆರ್. ಕಾರಂತರು ಮಾತಾಡುತ್ತಾ—ನಾಯಕನನ್ನು, ಒಬ್ಬನೇ ನಾಯಕನನ್ನು ಆರಿಸುವುದು ಪಾರ್ಟಿಯ ಸಹಜವಾದ ಹಕ್ಕು; ಒಬ್ಬರಿಗಿಂತ ಹೆಚ್ಚಿನ ವರನ್ನು ನಾಯಕರನ್ನಾಗಿ ಚುನಾಯಿಸುವ ಹಕ್ಕು ದಲ್ಲ. ರಾಷ್ಟ್ರಪತಿಗಳು ಕೆಲವರ ಹೆಸ ರನ್ನು ಕಳುಹಿಸಬೇಕೆಂದುದು ಪಾರ್ಟಿಯ ಚುನಾವಣೆಯ ಹಕ್ಕಿಗೆ ಒಗ್ಗುತಕ್ಕದ್ದಲ್ಲ; ಅಷ್ಟೇ ಅಲ್ಲದೆ ಶ್ರೀ. ಸಿ. ರಾಜಗೋಪಾಲಾಚಾರಿಯವರನ್ನು ಆರಿಸಬೇಕೆಂಬ ಸಲಹೆ ಸ್ವೀಕಾರವಾಗದಿದ್ದರೆ ತಮ್ಮ ಜವಾಬು ದಾರಿಯ ಮೇಲೆ ಒಬ್ಬ ನಾಯಕನನ್ನು ಆರಿಸುವುದು ನಿಮಗೇ ಸೇರಿದೆ ಎಂದು ರಾಷ್ಟ್ರಪತಿಗಳು ಈ ಮೊದಲು ಹೇಳಿದು ದಕ್ಕೆ ಇದು ತೀರಾ ವಿರೋಧವಾಗಿದೆ. ಆದ್ದರಿಂದ ನಾಯಕನ ಚುನಾವಣೆ ಕೆಲಸ ಸಾಗಬಹುದು ಎಂದರು

ಶ್ರೀಗಳಾದ ಎ. ವೈದ್ಯನಾಥ ಅಯ್ಯರ್, ಎನ್. ಎಸ್. ವರದಾಚಾರಿ, ಡೇನಿಯಲ್ ಥೋಮಸ್, ಟಿ ಎಸ್. ಅನಿನಾಶಲಿಂಗಂ ಚೆಟ್ಟಿ ಮೊದಲಾದವರು ಮಾತಾಡಿದರು. ಶ್ರೀ ಮಾಧವ ಮೆನೊನರು ಅಧೀನ ಸಂಸ್ಥೆ ಗಳ ಮೇಲೆ ರಾಷ್ಟ್ರಪತಿಗಳಿಗಿರುವ ಹಿಡಿತದ ಕುರಿತು ವಿವರಿಸಿದರು. ಅನಂತರ ಅಧ್ಯಕ್ಷ ಶ್ರೀ ಗಿರಿಗಳು ಇಂಥ ಸಂದಿಗ್ಧಮಯವಾದ ಸಮಸ್ಯೆಯ ತೀರ್ಮಾನದ ಹೊಣೆ ತಾವು ಹೊರಲಾರೆನೆಂದೂ ಇದನ್ನು ಸ್ಪಷ್ಟಗೊಳಿ ಸುವ ಹಾಗೆ ರಾಷ್ಟ್ರಪತಿಗಳನ್ನೇ ಪ್ರಾರ್ಥಿ ಸುವೆನೆಂದೂ ತಿಳಿಸಿದರು. ಮೀಟಿಂಗ್ ಅಲ್ಲಿಂದ ಮುಂದುವರಿಸಲಾಯಿತು

ದಿವಂಗತ
ರಾ॥ ಬ॥ ಶ್ರೀನಿವಾಸ ಶಾಸ್ತ್ರಿ

ಭಾರತದ ಸುಪ್ರಸಿದ್ಧ ಹಿರಿಯ ರಾಜ ನೀತಿವಿಶಾರದರೂ, ಶ್ರೇಷ್ಠ ವಾಗ್ಮಿಗಳೂ ಗಾಂಧೀಜಿಯವರ ವಿಶ್ವಾಸ ಪಾತ್ರರಾದ ಗೆಳೆ ಯರೂ ಆಗಿದ್ದ ರಾ॥ ಬ॥ ವಿ. ಎಸ್. ಶ್ರೀನಿವಾಸ ಶಾಸ್ತ್ರಿ ಅವರು ಮದ್ರಾಸಿನಲ್ಲಿ ತಮ್ಮ ೭೭ನೇ ವರ್ಷಪ್ರಾಯದಲ್ಲಿ ಈಚೆಗೆ ದಿವಂಗತರಾದ ಸಂದರ್ಭದಲ್ಲಿ ಭಾರತದ ಮುಂದಾಳುಗಳೆಲ್ಲರ ಧಾರಾಳ ಪ್ರಶಂಸೆ ಅವರಿಗೆ ಸಂದಿದೆ

In the Court of the
Subordinate Judge of
South Kanara

Appeal suit No. 67 of 1946 and
R. I. A. No. 445/1946

Between:-
1. Ummar Beary. 2. Koloth Mammunhi Beary—Appellants. (Petitioners.)
and
Moidinkutty Beary—Respondent.
To

The Respondent: Moidinkutty Beary is the son of Bavikere Mahammad Beary Land holder, residing in Muliyar village of Kasaragod Taluk. Post Muliyar.

Please take notice that the above appeal and the application for stay have been presented by the Appellants (Petitioners) and stands posted for hearing to 25th June 1946.

You are hereby informed that you may appear either in person or by a Pleader and oppose the same and if you fail to appear, the matter will be heard without your presence.

M. K. Nambiyar,
Counsel for Appellants.
Mangalore 18—4—46.

ಮಂಗಳೂರು

ಶಾಲಾ ವರ್ಧಂತಿ

ಬೋಳೂರಿನ ರೂರಲ್ ಎಲಿಮೆಂಟರಿ ಶಾಲಾ ವರ್ಧಂತಿಯು ಇದೇ ತಾ. ೨೬ನೇ ಸಂಜೆ ೫-೩೦ಕ್ಕೆ ಕೆನರಾ ಹೈಸ್ಕೂಲಿನ ಉರ್ದು ಶಾಖೆಯ ಹೆಡ್ಮಾಸ್ಟರ್ ಶ್ರೀ. ಯು. ಕೇಶವರಾವ್ ಅವರ ಅಧ್ಯಕ್ಷತೆಯಲ್ಲಿ ಜರುಗಲಿದೆ.

ಸಂಗೀತ ಕಚೇರಿ

ಮಂಗಳೂರು ಸಂಗೀತ ಸಭೆಯ ಆಶ್ರಯದಲ್ಲಿ ನಿನ್ನೆ ಸಂಜೆ "ಶ್ರೀ. ರಂಗಭವನ"ದಲ್ಲಿ ಪ್ರೊಫೆಸರ್ ಅಬ್ದುಲ್ ಸತಾರ್ ಖಾನರ ಹಾಡುಗಾರಿಕೆ ಮತ್ತು ಪ್ರೊಫೆಸರ್ ತಾರಾನಾಥರವರ ತಬ್ಲಾ ವಾದನದ ಒಂದು (ಹಿಂದುಸ್ಥಾನಿ) ಸಂಗೀತ ಕಚೇರಿ ನಡೆಯಿತು.

ದ. ಕ. ಜಿಲ್ಲಾ ಕುಲಾಲ ಯುವಕ ಸಮಿತಿ

ಈ ಸಮಿತಿಯ ಸಾಮಾನ್ಯ ಸಭೆಯು ಈಚೆಗೆ ಕೊಳ್ನಾಡು ಶ್ರೀ. ಟಿ. ರಾಮಪ್ಪ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಸಮಿತಿಯ ಆಫೀಸಿನಲ್ಲಿ ಜರುಗಿತು. ಸಮಿತಿಯ ಏಳಿಗೆಯನ್ನು ಬಯಸಿ ಶ್ರೀ. ಯಂ ಪಕೀರ ಮಾಸ್ತರರೂ, ಸಮಿತಿಯು ಮುಂದೆ ಕೈಕೊಳ್ಳಬೇಕಾದ ಕಾರ್ಯಕಲಾಪಗಳ ಕುರಿತು ಶ್ರೀ. ಯಂ ಕಾಂತಪ್ಪ ಮಾಸ್ತರರೂ, ಸಮಾಜದ ಸಂಘಟನೆಯನ್ನು ಎವರಿಸಿ ಶ್ರೀ ಟಿ.ಕೆ.ಚಂದಪ್ಪನವರೂ ಸುರಸವಾದ ಭಾಷಣಗಳನ್ನಿತ್ತ ಬಳಿಕ ಶ್ರೀ. ಎ. ಬಾಬುನವರು ಸಮಿತಿಯ ಉದ್ದೇಶಗಳನ್ನು ಎವರಿಸಿ ಮಾತಾಡಿದರು. ಅಧ್ಯಕ್ಷರು, ಸಮಿತಿಯು ಈ ವರೆಗೆ ಕೈಕೊಂಡ ಕಾರ್ಯಗಳನ್ನು ಪ್ರಶಂಸಿಸಿ ಭಾಷಣವಿತ್ತರು.

——

ದೇಶಭಕ್ತ ಕಾರ್ನಾಡ್ ಸದಾಶಿವರಾವ್ ವಾಚನಾಲಯ, ಕಾಸರಗೋಡು.

ಕಾಸರಗೋಡಿನಲ್ಲಿ ಬಹಳ ಕಾಲದಿಂದ ತೋಗಿಬಂದಿದ್ದ ಒಂದು ಧರ್ಮಾರ್ಥ ವಾಚನಾಲಯದ ಕೊರತೆಯು ಈಗ ನಿವಾರಿಸಲ್ಪಟ್ಟಿದೆ. ಇತ್ತೀಚೆಗೆ ಪ್ರಮುಖರಾದ ಶ್ರೀ ಬಿ. ಎಸ್. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ "ದೇಶಭಕ್ತ ಕಾರ್ನಾಡು ಸದಾಶಿವರಾವ್ ವಾಚನಾಲಯ"ದ ಉದ್ಘಾಟನಾ ಸಮಾರಂಭವು ಜರಗಿತು. ಶ್ರೀ. ಎಂ. ಉಮೇಶರಾಯರು ಸಭೆಯ ಆರಂಭ ಭಾಷಣ ಮಾಡುತ್ತ, ಕಾಸರಗೋಡಿನಲ್ಲಿ ಒಂದು ವಾಚನಾಲಯದ ಅತ್ಯಾವಶ್ಯಕತೆಯನ್ನು ಎಸ್ತಾರವಾಗಿ ಎವರಿಸಿ, "ಇಂದು ಇದು ಕೇವಲ ವಾಚನಾಲಯವಾಗಿ ಸ್ಥಾಪಿಸಲ್ಪಟ್ಟಿದ್ದರೂ ಕಾಸರಗೋಡಿನಲ್ಲಿ ಎಲ್ಲಾ ತರದ ರಾಷ್ಟ್ರೀಯ ಚಟುವಟಿಕೆಗಳಿಗೂ ಇದು ಕೇಂದ್ರವಾಗಬೇಕೆಂಬುದೇ ನಮ್ಮ ಧ್ಯೇಯ" ಎಂದರು. ಅನಂತರ, ವಾಚನಾಲಯಕ್ಕೆ ದಿ. ಸದಾಶಿವರಾಯರ ಹೆಸರಿಟ್ಟುದರ ಮಹತ್ವವನ್ನು ಸೂಚಿಸುತ್ತಾ — "ಇಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಜಾಗ್ರತಿಯಿದೆಯಾದರೆ ಅದು ಖಂಡಿತವಾಗಿಯೂ ದೇಶಭಕ್ತ ಸದಾಶಿವರಾಯರ ನಿಷ್ಕಾಮ ಸೇವೆ ಮತ್ತು ತ್ಯಾಗಗಳ ಫಲವಾಗಿದೆ. ಈ ವಾಚನಾಲಯವು ನಮಗೆ ಅವರ ಮೇಲಿರುವ ಗೌರವದ ಸಂಕೇತವಾಗಿರಲಿ" ಎಂದರು. ಆ ಮೇಲೆ, ಅಧ್ಯಕ್ಷರಾದ ಶ್ರೀ ಕಕ್ಕಿಲ್ಲಾಯರು ತಮ್ಮ ವಿಚಾರಪೂರ್ಣ ಭಾಷಣದಲ್ಲಿ — "ಶ್ರೀ ಉಮೇಶರಾಯರ ಈ ಸದುದ್ದೇಶದ ಕಾರ್ಯದಲ್ಲಿ ಎಲ್ಲರೂ ಮನಃಪೂರ್ವಕ ಸಹಕರಿಸಬೇಕೆಂದು ಎನಂತಿಸಿದರು. ಅಲ್ಲಪೆ, ದೇಶಭಕ್ತ ಸದಾಶಿವರಾಯರ ಧ್ಯೇಯಗಳನ್ನು, ಈ ವಾಚನಾಲಯದ ಮೂಲಕ ಸಾಧಿಸಲು ಪ್ರಯತ್ನಿಸುವುದರಿಂದಲೇ, ನಮಗೆ ಅವರ ಮೇಲಿರುವ ಗೌರವವನು ವ್ಯಕ್ತಪಡಿಸಿದಂತಾದೀತು. ಈ ಕಾರ್ಯದಲ್ಲಿ ಯಶಸ್ವಿಗಳಾಗುವಂತೆ ಪರಮಾತ್ಮನು ನಮಗೆ ಶಕ್ತಿ ನೀಡಲಿ" ಎಂದು ಹೇಳಿ ತನ್ನ ಭಾಷಣವನ್ನು ಮುಗಿಸಿದರು.

——

ಮಿ. ಜಿನ್ನರೂ ಬ್ರಿಟಿಶ್ ನಿಯೋಗ ಗೋಷ್ಠಿಯೂ

ಈಚೆಗೆ ತಾ. ೧೬ರಲ್ಲಿ ಬ್ರಿಟಿಶ್ ನಿಯೋಗ ಗೋಷ್ಠಿಯವರಿಗೂ ಮಿ. ಜಿನ್ನರಿಗೂ ಮಾತುಕತೆಗಳು ನಡೆದಾಗ ಗೋಷ್ಠಿಯವರು—ಅಧಿಕಾರವನ್ನು ಒಂದು ಸಂಸ್ಥೆಗೆ ಮಾತ್ರವೇ ವರ್ಗಾಯಿಸಬಹುದು; ಎರಡು ಸಂಸ್ಥೆಗಳಿಗಲ್ಲವೆಂದೂ ಆದ್ದರಿಂದ ಇಂಡಿಯದಲ್ಲಿ ಎರಡು ಕೇಂದ್ರಗಳನ್ನು ಸ್ಥಾಪಿಸಲಾಗದೆಂದೂ, ಒಂದೇ ಕೇಂದ್ರವನ್ನು, ಭದ್ರತೆಯ ಕಾರಣಗಳಿಗಾಗಿ ಸ್ಥಾಪಿಸಬೇಕೆಂದೂ ಮುಸ್ಲಿಮರಿಗಾಗಿ ಪ್ರತ್ಯೇಕ ಸಂಸ್ಥಾನವನ್ನು ರಚಿಸಲು ಅಡ್ಡಿ ಇಲ್ಲ; ಆದರೆ ರಕ್ಷಣೆ, ವಿದೇಶೀ ಕಾರ್ಯಭಾರ, ಕಸ್ಟಮ್ಸ್ ಮತ್ತು ವಹಿವಾಟ ಮಾರ್ಗ ಇತ್ಯಾದಿಗಳಿಗಾಗಿರುವ ಒಂದು ಕೇಂದ್ರದ ಏರ್ಪಾಡಿಗೊಪ್ಪಿದರೆ ಮಾತ್ರ ಆ ಪ್ರತ್ಯೇಕ ಸಂಸ್ಥಾನ ಸ್ಥಾಪನೆಯ ಮಾತೆಂದೂ ಮಿ. ಜಿನ್ನರಿಗೆ ತಿಳಿಸಿರುವುದಾಗಿ ವಾರ್ತೆ. ಮಿ. ಜಿನ್ನರು ಈ ವಿಷಯದಲ್ಲಿ ನಿಧಾನವಾಗಿ ಆಲೋಚಿಸಿ ಗೋಷ್ಠಿಯವರು ಕಾಶ್ಮೀರದಿಂದ ಬಂದ ಬಳಿಕ ಉತ್ತರಕೊಡುವರೆಂದು ಹೇಳಲಾಗಿದೆ.

ಹಿಂದೂ ಸೇನೆಗಳು ಹಿಂದೆಗೆದುದೇಕೆ?

ಅಮೆರಿಕದ ಇಂಡಿಯಾ ಲೀಗಿನ ಅಧ್ಯಕ್ಷರಾದ ಶ್ರೀ.ಜೆ.ಜೆ ಸಿಂಗರು ನ್ಯೂಯೊರ್ಕಿನ ತಮ್ಮದೊಂದು ಭಾಷಣ ಕಾಲದಲ್ಲಿ "ಬ್ರಿಟನು ಇಂಡೋನೇಸ್ಯದಿಂದ ಹಿಂದೀ ಸೇನೆಗಳನ್ನು ಹಿಂದೆಗೆಯಲು ಕಾರಣವೇನೆಂದರೆ— ಆ ಹಿಂದೀ ಸೈನಿಕರಲ್ಲಿ ಸಾವಿರಾರು ಮಂದಿ ಬ್ರಿಟಿಶರ ಸಂಪರ್ಕವನ್ನು ಬಿಟ್ಟು ಇಂಡೋನೇಸ್ಯದವರ ಸ್ವಾತಂತ್ರ್ಯ ಸಂಗ್ರಾಮದೊಡನೆ ಸೇರಿಕೊಂಡಿದ್ದೇ" ಎಂದರು.

ಮಧ್ಯಪ್ರಾಂತದಲ್ಲಿ ಚುನಾವಣೆಗಳು

ಮಧ್ಯಪ್ರಾಂತದಲ್ಲಿನ ಎಸೆಂಬ್ಲಿಯ ೧೧೨ ಸ್ಥಾನಗಳಲ್ಲಿ ೯೨ ಕಾಂಗ್ರೆಸ್ಸಿಗೆ, ೧೩ ಮುಸ್ಲಿಂ ಲೀಗಿಗೆ, ಮಿಕ್ಕವು ಇತರ ಪಾರ್ಟಿಗಳಿಗೆ ದೊರಕಿವೆ

ಕೇಂದ್ರ ಎಸೆಂಬ್ಲಿ ಕಾಂಗ್ರೆಸ್ ಪಾರ್ಟಿ

ಈ ಎಸೆಂಬ್ಲಿ ಪಾರ್ಟಿಯವರಿಗೆ ದಿಲ್ಲಿಯಲ್ಲಿ ಒಂದು ಶಾಶ್ವತ ಸೆಕ್ರೆಟೇರಿಯಟನ್ನು ಸ್ಥಾಪಿಸುವ ಯೋಚನೆ ಇದ್ದು ಆ ಸಂಬಂಧ ಪಾರ್ಟಿಯ ನಿರ್ಣಯವಾಗಿದೆ. ಆದರಲ್ಲಿ ೩ ಮಂದಿ ಸಂಬಳದ ಅಧಿಕಾರಿಗಳಿರುವರು. ಎಸೆಂಬ್ಲಿಯಲ್ಲಿ ಚರ್ಚೆಗೆ ಬರಬಹುದಾದ ವಿಷಯಗಳಿಗೆ ಸಂಬಂಧಿಸಿದ ಅಂಕೆಸಂಖ್ಯೆ ಇತ್ಯಾದಿ ಮಾಹಿತಿಯನ್ನು ಸಂಗ್ರಹಿಸಿ ಮೆಂಬರರಿಗೆ ಒದಗಿಸುವುದು ಆ ಅಧಿಕಾರಿಗಳ ಕೆಲಸ. ಇದಕ್ಕಾಗಿ ತಿಂಗಳಿಗೆ ಒಂದು ಸಾವಿರ ರೂಪಾಯಿ ದೊರಕುವ ಹಾಗೆ ಮಾಡಬಹುದೆಂದು ಆ ಪಾರ್ಟಿ ಮುಂದಾಳಾದ ಶ್ರೀ ಶರತ್‌ಚಂದ್ರ ಬೋಸರು ತಿಳಿಸಿದರು.

ಖಜಾನೆ ಲೂಟ

ಬರ್ಮಾ ಪ್ರಾಂತದ ಟಾಂಗೊ ಜಿಲ್ಲೆಯ ಕ್ಯಾಯುಕೆ ಪೋಲೀಸ್ ಸ್ಟೇಶನ್ನನ್ನು ೨೦೦ ಮಂದಿ ಡಕಾಯಿತರು ಸುಟ್ಟು, ಕೋರ್ಟನ್ನು ಧ್ವಂಸ ಮಾಡಿ ಖಜಾನೆಯಲ್ಲಿ ಲೂಟಿ ನಡೆಸಿ ೨೬ ಸಾವಿರ ರೂಪಾಯಿಗಳನ್ನು ಅಪಹರಿಸಿಕೊಂಡು ಹೋದದ್ದಲ್ಲದೆ ಅಲ್ಲಿನ ಪೋಲೀಸ್ ಇನಸ್ಪೆಕ್ಟರನ್ನೂ ೩ ಮಂದಿ ಪೋಲೀಸ್ ಕಾನ್ಸ್‌ಟೇಬಲರನ್ನೂ ಕೊಂದರು. ಅನಂತರ ದಾರಿಯಲ್ಲಿ ಎಲಿಟರಿಯವರಿಗೂ ಇವರಿಗೂ ಲಡಾಯಿಯಾಗಿ ೫ ಮಂದಿ ಡಕಾಯಿತರು ಕೊಲ್ಲಲ್ಪಟ್ಟರು, ಇಬ್ಬರು ಡಕಾಯಿತರಿಗೆ ಗಾಯಗಳಾಗಿವೆ. ೧೮ ಮಂದಿ ಸೆರೆ ಸಿಕ್ಕಿ ಬಿದ್ದಿದ್ದಾರೆ.

ಪತ್ರಿಕೋದ್ಯಮಿಗಳ ಸಮ್ಮೇಳನ

ತಮಿಳುನಾಡಿನ ಪತ್ರಿಕೋದ್ಯಮಿಗಳ ಸಮ್ಮೇಳನದ ೫ನೆಯ ಅಧಿವೇಶನವು ಮದ್ರಾಸಿನಲ್ಲಿ, "ಹಿಂದೂ" ಪತ್ರಿಕೆಯ ಉಪ ಸಂಪಾದಕರಾದ ಶ್ರೀ ಎನ್. ರಘುನಾಥ ಅಯ್ಯರರ ಅಧ್ಯಕ್ಷತೆಯಲ್ಲಿ ಜರುಗಿತು. "ಹಿಂದುಸ್ಥಾನ" ಪತ್ರಿಕೆಯ ಸಂಪಾದಕ ಶ್ರೀ. ಆರ್. ನಾರಾಯಣ ಅಯ್ಯಂಗಾರ್— ಸ್ವಾಗತ ಸಮಿತಿ ಅಧ್ಯಕ್ಷರು-ಸ್ವಾಗತ ಭಾಷಣ ಮಾಡಿದರು.

ಆಫ್ರಿಕದ ಹಿಂದೀ ಹ್ಯಾ ಕಮಿಶನರರು

ಆಫ್ರಿಕದಲ್ಲಿ ಹಿಂದೀಯರ ವಿರುದ್ಧವಾದ ಅದೊಂದು ಮಸೂದೆಯ ಕಾರಣದಿಂದ ಅಲ್ಲಿನ ಭಾರತದ ಹ್ಯಾ ಕಮಿಶನರರನ್ನು ಬೇಗನೇ ಇಲ್ಲಿಗೆ ಹಿಂದಕ್ಕೆ ಕರೆಸಲಾಗುವುದೆಂದು ತಿಳಿದುಬಂದಿದೆ.

ಗಾಂಧಿಜಿ—ಜಿನ್ನಾ ಸಾಹೇಬರ ಮಾತುಕಥೆ

ಗಾಂಧಿಜಿ ಮತ್ತು ಮಿ. ಜಿನ್ನಾ ಸಾಹೇಬರೊಳಗೆ ಮಾತುಕಥೆಗಳಾಗುವ ಸಂಭವ ಎಲ್ಲವೆಂದು ಹೇಳಲಾಗಿದೆ.

ಬಂಗಾಳದ ಮಂತ್ರಿಮಂಡಲ

ಬಂಗಾಳ ಲೀಗ್ ಪಾರ್ಟಿಯ ನಾಯಕರಾದ ಮಿ. ಎಚ್. ಎಸ್. ಸುಹ್ರವರ್ದಿ ಅವರು ತಮ್ಮ ಮಂತ್ರಿಮಂಡಲದ ಎಂಟು ಹೆಸರುಗಳ ಪಟ್ಟಿಯನ್ನು ಅಲ್ಲಿನ ಗವರ್ನರರಿಗೊಪ್ಪಿಸಿದ್ದಾರೆ.

ನಮ್ಮ ಹೊಸ ಗವರ್ನರರು

ನಮ್ಮ ಅಧಿಪತ್ಯದ ಹೊಸ ಗವರ್ನರರಾದ ಸರ್ ಆರ್ಚಿಬಾಲ್ಡ ನಾಯ್ ಅವರು ಇದೇ ಮೇ ತಾ. ೧೯ಕ್ಕೆ ಬೊಂಬಯಿ ತಲುಪಿ ಅಲ್ಲಿಂದ ಮದ್ರಾಸಿಗೆ ತಾ ೩೧ರಲ್ಲಿ ಬರಬಹುದೆಂದು ವಾರ್ತೆ.

ಕೊಚ್ಚಿಯಲ್ಲಿ ಅಕ್ಕಿ ಇಡ್ಡಲಿ, ದೋಸೆಗಳಿಲ್ಲ

ಅಕ್ಕಿಯ ಇಡ್ಲಿ ದೋಸೆಗಳನ್ನು ಮಾಡಕೂಡದೆಂದು ಕೊಚ್ಚಿ ಸರಕಾರದವರು ತಮ್ಮಲ್ಲಿನ ಹೊಟೆಲ್‌ಗಳವರಿಗೆ ಅಪ್ಪಣೆ ಮಾಡಿದ್ದಾರೆ.

ಒರಿಸ ಮಂತ್ರಿಮಂಡಲ

ಒರಿಸದ ಕಾಂಗ್ರೆಸ್ ಮಂತ್ರಿಮಂಡಲದ ಮಂತ್ರಿಗಳೆಲ್ಲರೂ ಆಗಲೇ ರಾಜ ಪ್ರಮಾಣವನ್ನು ಕೈಕೊಂಡರು. ಶ್ರೀ. ಹರೇಕೃಷ್ಣ-ಮೆಹತಾಬ್ ಅವರು ಅಲ್ಲಿನ ಪ್ರಧಾನರು.

ಮದ್ರಾಸಿಗೆ ಸಂಪೂರ್ಣ ಆಹಾರ ಕೋಟಾ" ಇಲ್ಲ

ಡಿಲ್ಲಿಯಲ್ಲಿ ಜರುಗಿದ ಈಚಿಗಿನ ಆಹಾರ ಸಾಧನಗಳ ಸಮ್ಮೇಳನದಲ್ಲಿ ಮದ್ರಾಸಿಗೆ ಸಿಕ್ಕುವುದೆಂದಿದ್ದ ಆಹಾರ ಸಾಧನಗಳ ಸಂಪೂರ್ಣ "ಕೋಟಾ" ಸಿಕ್ಕಲಾರದೆಂದು ತಿಳಿದು ಬಂದಿದೆ.

—೫೦೫—

ವಾರ್ತಾ ಗುಚ್ಛ

ಬ್ರಿಟಿಶ್ ಮಂತ್ರಿಮಂಡಲದಲ್ಲಿ ಬದಲಾವಣೆಗಳು ಆಗಬಹುದಾಗಿದೆ.

ಫ್ರಾನ್ಸಿನಲ್ಲಿ ಹೊಸ ರಾಜ್ಯಘಟನೆಯ ಜಾರಿಗೆ ಬರಬಹುದಾಗಿದೆ.

ಸಿಂಧ್ ಎಸೆಂಬ್ಲಿ ಸ್ಪೀಕರ್ ಸಯ್ಯದ್ ಎಂರಾನ್ ಮಹಮ್ಮದ್ ಷಹಾ ಇವರ ಮೇಲೆ ಶ್ರೀ. ಆರ್ ಕೆ ಸಿದ್ವಾ ಅವರ "ಅವಿಶ್ವಾಸ"ದ ಠರಾವು ಬರಲಿದೆ.

ಇಂಡಿಯಕ್ಕೆ ಸಿಕ್ಕಬೇಕಾದಷ್ಟು ಆಹಾರ ಸಾಮಗ್ರಿಗಳು ಹೊರೆ ದೇಶಗಳಿಂದ ಬರುವ ಸಂಭವ ತೋರುವುದಿಲ್ಲ.

——

ಖಾತ್ರಿ ಬಣ್ಣದ ಆಧುನಿಕ ನಮೂನೆಯ
ಶ್ರೇಷ್ಠ ತರಗತಿಯ
80 ಮತ್ತು 100 "ಕೌಂಟ್" ನೀರಗಳು
ಮತ್ತು
ಕೈ ಮಗ್ಗದ ಮೈಟಿ ವ್ಯಾಲುಗಳು
ಪಡಕೊಳ್ಳುವ ಮುಂಚೆ JNC ಗುರುತನ್ನು ನೋಡಲು ಮರೆಯದಿರಿ.
ಜೆ. ನಾರಾಯಣ ಸಾಮಿ ಚೆಟ್ಟಿ ಎಂಡ್ ಕೊ.,
ರಖಂ ವ್ಯಾಪಾರಿ 18/498 ರಂಗೈ ಗೌಡರ ರಸ್ತೆ
ಕೊಯಂಮುತ್ತೂರು.

Printed & Published by M. Baburaya Prabhu, B. A., at the Mangalore Press, Car-Street, Mangalore. Editor: Hurli Bhima Rao